ಡ್ಯಾನಿಡಾ ಸ್ಕೀಮ್‌ಗೆ ಖರ್ಚಾದ ಹಣ

679 - ಶ್ರೀ ಎಂ.ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ಡ್ಯಾನಿಡಾ ಸ್ಕೀಂಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ವಿವಿಧ ಪ್ರದೇಶಗಳಲ್ಲಿ ನಿಗಧಿಪಡಿರುವ ಕೆಲಸಗಳೆಷ್ಟು?

ಆ) ರಾಜ್ಯದಲ್ಲಿ ತುಂಗಭದ್ರಾ ರಿವರ್‌ವ್ಯಾಲಿ ಪ್ರಾಜೆಕ್ಟ್‌ಗೆ (ಎನ್.ಸಿ) ಎಷ್ಟು ಪ್ರದೇಶ ಆಳವಡಿಸಿಕೊಳ್ಳಲಾಗಿದೆ?

ಇ) ಈವರೆಗೆ ಎಷ್ಟು ಕೆಲಸವನ್ನು ಯಾವ ಯಾವ ಪ್ರದೇಶದಲ್ಲಿ ಮಾಡಲಾಗಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ರೈತರ ಮಹಿಳೆ ಮತ್ತು ಯುವಕ ತರಬೇತಿ ವಿಸ್ತರಣಾ ಯೋಜನೆ ಮತ್ತು ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಗಳು ಡ್ಯಾನಿಡಾ ನೆರವಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗಳ ಪ್ರಾರಂಭದಿಂದ ಈವರೆಗೆ 838.078 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ರೈತರ ಮಹಿಳೆ ಮತ್ತು ಯುವಕ ತರಬೇತಿ ವಿಸ್ತರಣಾ ಯೋಜನೆ ರಾಜ್ಯದ 15 ತರಬೇತಿ ಕೇಂದ್ರಗಳ ಮೂಲಕ ಹಾಗೂ 170 (ಬೀದರ್‌ಜಿಲ್ಲೆ ಹೊರತು) ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

4920 ರೈತರ ಮಹಿಳೆಯರಿಗಾಗಿ 10 ದಿನಗಳ ತರಬೇತಿ 4730 ಯುವಕ ರೈತರಿಗೆ 14 ದಿನಗಳ ಅವಧಿ ತರಬೇತಿ, ರೈತ ಮಹಿಳೆಯರಿಗಾಗಿ 2 ದಿನಗಳ ಗ್ರಾಮಾಣಾಧಾರಿತ 110 ಕ್ಯಾಂಪ್‌ಗಳು ಮತ್ತು 5 ದಿನಗಳ 1500 ರೈತರ ಮಹಿಳೆಯರಿಗೆ ಸಂಪರ್ಕ ಕಾರ್ಯಕರ್ತೆಯರ ತರಬೇತಿ.

ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಸದರಿ ಯೋಜನೆಯಲ್ಲಿ ನಿಗದಿ ಪಡಿಸಿರುವ ಕಾರ್ಯಕ್ರಮಗಳಿಂದರೆ 29439 ಹೆ.ನಲ್ಲಿ ಭೂ ಅಭಿವೃದ್ಧಿ ಮತ್ತು ಭೂಸಾರ ಸಂರಕ್ಷಣೆ ಕಾಮಗಾರಿಗಳು 3480 ಹರಿದು ಹೋಗುವ ನೀರು ಸಂಗ್ರಹಣಾ ವಿನ್ಯಾಸಗಳ ರಚನೆ 4455 ಹೆಕ್ಟೇರ್‌ನಲ್ಲಿ ಸುಧಾರಿತ ಬೆಳೆ ಅಭಿವೃದ್ಧಿ ಕಾರ್ಯಕ್ರಮ 345 ಕೃಷಿ ಉಪಕರಣಗಳ ವಿತರಣೆ 20875 ಹೆಕ್ಟೇರ್‌ನಲ್ಲಿ ಕೃಷಿ ಅರಣ್ಯ ಅಭಿವೃದ್ಧಿ ಪಡಿಸುವುದು 340ಹೆಕ್ಟೇರ್‌ನಲ್ಲಿ ತೋಟಗಾರಿಗಾ ಬೆಳೆ ಅಭಿವೃದ್ಧಿ ಮತ್ತು ಶಾಲೆಯ ಆವರಣ ತೋಟ ಮತ್ತು ನೀರು ಸಂಗ್ರಹಣ ವಿನ್ಯಾಸಗಳ ರಕ್ಷಣೆಗಾಗಿ 50960 ಸಸಿಗಳ ನಾಟಿ ಕಾರ್ಯಕ್ರಮ.

ಆ) ತುಂಗಭದ್ರಾ ನದಿ ಕಣಿವೆ ಯೋಜನೆ ಒಟ್ಟು ಜಲಾನಯನ ಪ್ರದೇಶದಲ್ಲಿ ಮಣ್ಣಿನ ಸವಕಳಿಗೆ ಹೆಚ್ಚಾಗಿ ತುತ್ತಾಗಿರುವಂತಹ 8.72 ಲಕ್ಷ ಹೆಕ್ಟೇರು ಪ್ರದೇಶವನ್ನು ಆಯ್ಕೆ ಮಾಡಿದ್ದು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಇ) ತುಂಗಭದ್ರಾ ನದಿ ಕಣಿವೆ ಯೋಜನೆಯ ಅಭಿವೃದ್ಧಿ ಕೆಲಸಗಳು 1963-64ನೇ ಸಾಲಿನಿಂದ ಪ್ರಾರಂಭವಾಗಿದ್ದು ಮಾರ್ಚ್ 1992ರ ವರೆಗೆ ಯೋಜಿತ 8.72 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಳ್ಳಾರಿ, ರಾಜಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ 2.35ಲಕ್ಷ ಹೆಕ್ಟೇರು ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ.